# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 419(518)(ಸಿಆಸು ಇಲಾಖೆಯಿಂದ ವರ್ಗಾಯಿತ) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ), |
| ಉತ್ತರಿಸಬೇಕಾದ ದಿನಾಂಕ | : | 12-12-2024 |
| ಉತ್ತರಿಸುವ ಸಚಿವರು | : | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರದ ಒಟ್ಟು ಕಛೇರಿಗಳ ಸಂಖ್ಯೆ ಎಷ್ಟು: ಇಲಾಖಾವಾರು ಮಾಹಿತಿ ನೀಡುವುದು: ಬಾಕಿ ಉಳಿದ ಇಲಾಖೆಗಳು ಎಷ್ಟು:ಹಾಗೂ ವಿವಿಧ ಇಲಾಖೆಗಳ ಕಚೇರಿಗಳನ್ನು ಸ್ಥಳಾಂತರಿಸಲು ಇರುವ ಅಡಚಣೆಗಳೇನು:ಸ್ಥಳಾಂತರಿಸದಿರಲು ಕಾರಣಗಳೇನು: | ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಒಟ್ಟು ಕಛೇರಿಗಳ ಸಂಖ್ಯೆ:31, ಇಲಾಖಾವಾರು ಮಾಹಿತಿಯನ್ನು ಅನುಬಂಧದಲ್ಲಿರಿಸಿದೆ.<br><br>02 ರಾಜ್ಯ ಮಟ್ಟದ ಕಛೇರಿಗಳನ್ನು ಸ್ಥಳಾಂತರಿಸಲು ಆದೇಶಿಸಿದ್ದು, ರಾಜ್ಯ ಮಾಹಿತಿ ಆಯೋಗದ ಕಛೇರಿಯು ಈಗಾಗಲೇ ಕಾರ್ಯನಿರ್ವಹಿಸುತ್ತಿದೆ. ಮುಂದುವರೆದು, ದಿನಾಂಕ:20.11.2024ರ ಸರ್ಕಾರದ ಅಧಿಸೂಚನೆಯಲ್ಲಿ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯ ಕೇಂದ್ರ ಕಛೇರಿಯನ್ನು ಸುವರ್ಣ ಸೌಧಕ್ಕೆ ಸ್ಥಳಾಂತರಿಸಲಾಗಿದೆ.<br><br>ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬೆಳಗಾವಿಯ ಜಿಲ್ಲಾ ಹಂತದ 29 ಕಛೇರಿಗಳನ್ನು ಈಗಾಗಲೇ ಸುವರ್ಣ ಸೌಧಕ್ಕೆ ಸ್ಥಳಾಂತರಿಸಲಾಗಿದ್ದು, ಬೇರೆ ಇಲಾಖೆ/ ಕಛೇರಿಗಳನ್ನು ಸ್ಥಳಾಂತರಿಸಲು ಸುವರ್ಣ ವಿಧಾನ ಸೌಧದಲ್ಲಿ ಸ್ಥಳಾವಕಾಶವು ಲಭ್ಯವಿರುವುದಿಲ್ಲ. |
| ಆ) | ಆ ಭಾಗದ ರೈತರ, ಸಾರ್ವಜನಿಕರ ಮತ್ತು ನೌಕರರುಗಳ ಸಾಕಷ್ಟು ಕೆಲಸ ಕಾರ್ಯಗಳಿಗೆ ಬೆಂಗಳೂರಿಗೆ ಬಂದು ಹೋಗಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ತೊಂದರೆ ನಿವಾರಣೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು: (ಕಾರಣಗಳೊಂದಿಗೆ ವಿವರಿಸುವುದು) | |
| ಇ) | ಸಮಗ್ರ ಉತ್ತರ ಕರ್ನಾಟಕ ಭಾಗದ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರದ ಕಚೇರಿಗಳನ್ನು ಬೆಳಗಾವಿಯ ಸುವರ್ಣ ವಿಧಾನ ಸೌಧಕ್ಕೆ ಸ್ಥಳಾಂತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ: ಯಾವ ಕಾಲಮಿತಿಯೊಳಗೆ ಸ್ಥಳಾಂತರಿಸಲಾಗುವುದು?(ಮಾಹಿತಿ | |

ಸಂಖ್ಯೆ: ಪಿಡಿಎಸ್ 12 ಪಿಆರ್ಐ 2024

(ಡಿ.ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು

ಅನುಬಂಧ

## ಸುವರ್ಣ ವಿಧಾನ ಸೌಧದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿಗಳ ವಿವರ

| ಕ್ರ ಸಂ | ಕಛೇರಿಗಳ ವಿವರ | ಸ್ಥಳಾಂತರಗೊಂಡ ದಿನಾಂಕ |
|---|---|---|
| 1 | ಜಿಲ್ಲಾ ಉದ್ಯೋಗ ವಿನಿಯಮ ಕಛೇರಿ ಬೆಳಗಾವಿ | 07-09-2020 |
| 2 | ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ | 01-09-2020 |
| 3 | ಶಿಶು ಅಭಿವೃದ್ಧಿ, ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ ಕಛೇರಿ ಬೆಳಗಾವಿ (ಗ್ರಾಮೀಣ) | 01-09-2020 |
| 4 | ಜಂಟಿ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ ಪಶ್ಚಿಮ ವಲಯ ವಿಭಾಗ ಬೆಳಗಾವಿ | 01-09-2020 |
| 5 | ಸಹಾಯಕ ಆಯುಕ್ತರು (ಭೂಸ್ವಾಧೀನ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಬೆಳಗಾವಿ (KSHIP) | 05-09-2020 |
| 6 | ಸಹಾಯಕ ಪ್ರಧಾನ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ | 18-09-2020 |
| 7 | ಹಿರಿಯ ಭೂವಿಜ್ಞಾನ ಅಂತರ್ಜಲ ನಿರ್ದೇಶನಾಲಯ ಬೆಳಗಾವಿ | 01-09-2020 |
| 8 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ | 28-04-2022 |
| 9 | ಉಪ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಬೆಳಗಾವಿ | 01-09-2020 |
| 10 | ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಬೆಳಗಾವಿ | 18-09-2020 |
| 11 | ಭಾರತೀಯ ಸ್ಟೇಟ್ ಬ್ಯಾಂಕ್ (SBI) | 20-10-2020 |
| 12 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸುವರ್ಣ ಸೌಧ ಉಪ ವಿಭಾಗ ಬೆಳಗಾವಿ | 11-10-2012 |
| 13 | ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಳಗಾವಿ | 27-08-2020 |
| 14 | **ಜಂಟಿ ನಿರ್ದೇಶಕರು, ಸಹಕಾರ ಸಂಘಗಳ, ಲೆಕ್ಕಪರಿಶೋಧನಾ ಇಲಾಖೆ ಬೆಳಗಾವಿ** | **01-03-2016** |
| 15 | ಪೋಲಿಸ್ ಇನ್ಸ್ಪೆಕ್ಟರ್ ರವರ ಕಛೇರಿ (ಕೆ.ಎಸ್.ಐ.ಎಸ್.ಎಫ್) ಐ.ಎಸ್.ಡಿ ಸುವರ್ಣ ಸೌಧ ಬೆಳಗಾವಿ | 01-03-2016 |
| 16 | ಕಾರ್ಯನಿರ್ವಾಹಕ ಅಭಿಯಂತರರು ಮಾರುಕಟ್ಟೆ ಅಭಿವೃದ್ಧಿ ಯೋಜನೆ ಕೃಷಿ ಮಾರಾಟ ಇಲಾಖೆ, ಬೆಳಗಾವಿ ವಿಭಾಗ ಬೆಳಗಾವಿ | 18-09-2020 |
| 17 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮಾರುಕಟ್ಟೆ ಅಭಿವೃದ್ಧಿ ಯೋಜನೆ ಕೃಷಿ ಮಾರಾಟ ಇಲಾಖೆ, ಉಪ ವಿಭಾಗ ಬೆಳಗಾವಿ | 18-09-2020 |
| 18 | ಸಹಾಯಕ ಕಮಾಂಡೆಂಟ್, ಕೆ.ಎಸ್.ಐ.ಎಸ್.ಎಫ್, ಬೆಳಗಾವಿ | 19-08-2023 |
| 19 | ಜಂಟಿ ಸಾರಿಗೆ ಆಯುಕ್ತರು, ಬೆಳಗಾವಿ ವಿಭಾಗ ಬೆಳಗಾವಿ | 30-04-2023 |

| | | |
|---|---|---|
| 20 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಳಗಾವಿ | 01-09-2020 |
| 21 | ಉಪ ಪ್ರಧಾನ ವ್ಯವಸ್ಥಾಪಕರು ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಳಗಾವಿ | 01-09-2020 |
| 22 | ಜಿಲ್ಲಾ ವ್ಯವಸ್ಥಾಪಕರು ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಳಗಾವಿ | 01-09-2020 |
| 23 | ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬೆಳಗಾವಿ | 18-05-2020 |
| 24 | ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ) ಬೆಳಗಾವಿ. | 03-09-2020 |
| 25 | ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಳಗಾವಿ | 01-09-2020 |
| 26 | ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ | 07-09-2020 |
| 27 | ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ | 16-09-2020 |
| 28 | ಜಂಟಿ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಳಗಾವಿ | 10-02-2022 |
| 29 | ಮುಖ್ಯ ಇಂಜಿನೀಯರರು, ರಾಷ್ಟ್ರೀಯ ಹೆದ್ದಾರಿಗಳು (ಉತ್ತರ ವಲಯ) ಬೆಳಗಾವಿ | 17-01-2024 |
| 30 | ವಿಶೇಷ ಜಿಲ್ಲಾಧಿಕಾರಿಗಳು, ಭೂ ಸ್ವಾಧೀನ ಪುನರ್ವಸತಿ ಮತ್ತು ಪುನರ್ ನಿರ್ಮಾಣ, ಬೃಹತ್ ನೀರಾವರಿ ಯೋಜನೆಗಳು, ಬೆಳಗಾವಿ | 17-09-2020 |
| 31 | ಜಂಟಿ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಬೆಳಗಾವಿ | 16-03-2024 |

ಸಹಿ/-

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು

ಲೋಕೋಪಯೋಗಿ ಇಲಾಖೆ

ಸುವರ್ಣ ಸೌಧ ಉಪ ವಿಭಾಗ ಬೆಳಗಾವಿ

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 77 ಸಿಓಎಫ್ 2019

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ:20.11.2024

## ಅಧಿಸೂಚನೆ

1. ಸರ್ಕಾರದ ಅಧಿಸೂಚನೆ ಸಂಖ್ಯೆ:ವಿಡಿ 75 ಯೋಪರ 2018, ದಿನಾಂಕ:10.01.2019ರಲ್ಲಿ ಅಧಿಸೂಚಿಸಿದಂತೆ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ವಿಡಿ 75 ಯೋಪರ 2018, ದಿನಾಂಕ: 23.09.2019ರಲ್ಲಿನ ಸೂಚನೆಯನ್ವಯ ದಿನಾಂಕ:01.10.2021ರಿಂದ ಜಾರಿಗೆ ಬರುವಂತೆ ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯದ ಕೇಂದ್ರ ಕಛೇರಿಯನ್ನು ಬೆಂಗಳೂರಿನಿಂದ ಬೆಳಗಾವಿಯ ಸುವರ್ಣಸೌಧಕ್ಕೆ ಸ್ಥಳಾಂತರಿಸಲು ಮತ್ತು ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯದ ಕಛೇರಿಯನ್ನು ಪೂರ್ಣ ಪ್ರಮಾಣದಲ್ಲಿ ಬೆಳಗಾವಿಯ ಸುವರ್ಣಸೌಧಕ್ಕೆ ಸ್ಥಳಾಂತರಿಸುವವರೆಗೆ ತಾತ್ಕಾಲಿಕವಾಗಿ ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯದ ಕಛೇರಿಯನ್ನು ಬೆಳಗಾವಿಯ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಲ್ಲಿ ಪ್ರಾರಂಭಿಸಲು ಸರ್ಕಾರದ ಆದೇಶ ಸಂಖ್ಯೆ: ಸಿಐ 77 ಸಿಓಎಫ್ 2019, ದಿನಾಂಕ:30.09.2021ರಲ್ಲಿ ಆದೇಶಿಸಲಾಗಿತ್ತು.
2. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಪರಿಷ್ಕೃತ ಆದೇಶ ಸಂಖ್ಯೆ: ಕಂಶಾ/ಲೋಇ/ವಿವ-5/2020-21, ದಿನಾಂಕ:20.01.2023ರಲ್ಲಿ ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯದ ರಾಜ್ಯಮಟ್ಟದ ಕಚೇರಿಗೆ ಬೆಳಗಾವಿಯ ಸುವರ್ಣಸೌಧದ ಕೊಠಡಿ ಸಂಖ್ಯೆ: 204, 204 ಎ, 205, 206, ಮತ್ತು 206 ಎ' ಗಳನ್ನು ಹಂಚಿಕೆ ಮಾಡಲಾಗಿರುತ್ತದೆ.
3. ಆದ್ದರಿಂದ, ಪ್ರಸ್ತುತ ಬೆಳಗಾವಿಯ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯದ ಕೇಂದ್ರ ಕಚೇರಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಬೆಳಗಾವಿಯ ಸುವರ್ಣಸೌಧದ ಕೊಠಡಿ ಸಂಖ್ಯೆ: 204, 204 ಎ, 205, 206, 206 ಎ' ಗಳಿಗೆ ಸ್ಥಳಾಂತರ ಮಾಡಿ ಅಧಿಸೂಚಿಸಿದೆ.

**ಷರತ್ತುಗಳು:**

i. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಪರಿಷ್ಕೃತ ಆದೇಶ ಸಂಖ್ಯೆ: ಕಂಶಾ/ಲೋಇ/ವಿವ-5/2020-21, ದಿನಾಂಕ:20.01.2023ರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು.

ii. ಲೋಕೋಪಯೋಗಿ ಇಲಾಖೆಯ ಸಂಬಂಧಿಸಿದ ಪ್ರಾಧಿಕಾರವನ್ನು ಸಂಪರ್ಕಿಸಿ ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯದ ಕೇಂದ್ರ ಕಚೇರಿಯನ್ನು ಬೆಳಗಾವಿಯ ಸುವರ್ಣಸೌಧದ ಕೊಠಡಿ ಸಂಖ್ಯೆ: 204, 204 ಎ, 205, 206 ಮತ್ತು 206 ಎ' ಗಳಿಗೆ ಸ್ಥಳಾಂತರಿಸುವ ಕಾರ್ಯವನ್ನು ಕೈಗೊಂಡು ಸರ್ಕಾರಕ್ಕೆ ಅನುಪಾಲನಾ ವರದಿಯನ್ನು ಸಲ್ಲಿಸತಕ್ಕದ್ದು.

iii. ಬೆಳಗಾವಿಯಲ್ಲಿ ಜರುಗುವ ಕರ್ನಾಟಕ ವಿಧಾನ ಮಂಡಲದ ಅಧಿವೇಶನದ ಸಮಯದಲ್ಲಿ ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯದ ಕೇಂದ್ರ ಕಚೇರಿಯ ನಿರ್ವಹಣೆಯನ್ನು ಬೆಳಗಾವಿಯ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಲ್ಲಿ ನಿರ್ವಹಿಸುವುದು.

iv. ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯದ ರಾಜ್ಯಮಟ್ಟದ ಕಚೇರಿಯ ವಿಳಾಸವು "ಆಯುಕ್ತರು ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶಕರು" ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯ, ಕೊಠಡಿ ಸಂಖ್ಯೆ 206, ಎರಡನೇ ಮಹಡಿ, ಸುವರ್ಣಸೌಧ, ಬೆಳಗಾವಿ-590020" ಎಂದು ಆಗಿರತಕ್ಕದ್ದು.

v. ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯದ ಕಚೇರಿ ದಾಖಲೆಗಳಲ್ಲಿ ಮತ್ತು ಕೇಂದ್ರ ಸರ್ಕಾರದೊಂದಿಗೆ / ಇತರೆ ರಾಜ್ಯ ಸರ್ಕಾರಗಳೊಂದಿಗೆ / ಕರ್ನಾಟಕ ಸರ್ಕಾರದ ಇಲಾಖೆಗಳೊಂದಿಗೆ / ನಿಗಮಗಳು / ಮಂಡಳಿಗಳು / ಸಂಸ್ಥೆಗಳು / ಸ್ವಾಯತ್ತ ಸಂಸ್ಥೆಗಳು/ ಸ್ಥಳೀಯ ಸಂಸ್ಥೆಗಳು /ಪ್ರಾಧಿಕಾರ ಗಳೊಂದಿಗೆ ನಡೆಸುವ ಎಲ್ಲಾ ಪತ್ರ ವ್ಯವಹಾರಗಳಲ್ಲಿ ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯದ ರಾಜ್ಯಮಟ್ಟದ ಕಚೇರಿಯ ವಿಳಾಸವನ್ನು ಆಯುಕ್ತರು ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶಕರು" ಕಬ್ಬು, ಅಭಿವೃದ್ಧಿ, ಹಾಗೂ ಸಕ್ಕರೆ ನಿರ್ದೇಶನಾಲಯ, ಕೊಠಡಿ ಸಂಖ್ಯೆ 206, ಎರಡನೇ ಮಹಡಿ, ಸುವರ್ಣಸೌಧ, ಬೆಳಗಾವಿ ಸುವರ್ಣಸೌಧ, ಬೆಳಗಾವಿ-590020" ಎಂದು ನಮೂದಿಸತಕ್ಕದ್ದು.

7 - DEC 2024
541750
ಸಂಖ್ಯೆ
ಅಪರ ಜಿಲ್ಲಾಧಿಕಾರಿಗಳು

....2

CS CamScanner

vi. ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ರಾಜ್ಯಮಟ್ಟದ ಕಚೇರಿಯ ಸ್ಥಳಾಂತರದ ಮಾಹಿತಿಯನ್ನು ಸಾರ್ವಜನಿಕರಿಗೆ / ರೈತರಿಗೆ / ಸಕ್ಕರೆ ಕಾರ್ಖಾನೆಗಳಿಗೆ ತಿಳಿಸುವ ಸಂಬಂಧ ವ್ಯಾಪಕ ಪ್ರಚಾರ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

([illegible])
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸಕ್ಕರೆ)

ಇವರಿಗೆ,
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ – ಮುಂದಿನ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲು ಕೋರಿದೆ.

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) & (ಇ&ಆರ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001
2. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560 001
3. ನಿಬಂಧಕರು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು / ಧಾರವಾಡ /ಕಲಬುರಗಿ
4. ಮಾನ್ಯ ಅಡ್ವೋಕೇಟ್ ಜನರಲ್‌ರವರು, ಕರ್ನಾಟಕ ಉಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ ಕಟ್ಟಡ, ಬೆಂಗಳೂರು 560001
5. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಎಸ್ ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿ.ಟಿ.ಎಸ್. ನಂ.4125/1ಬಿ, ಗಣೇಶಪುರ ರಸ್ತೆ, ಲಕ್ಷ್ಮೀಟೆಕ್, ಬೆಳಗಾವಿ-590009.
6. ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿ.ಟಿ.ಎಸ್. ನಂ.4125/1ಬಿ, ಗಣೇಶಪುರ ರಸ್ತೆ, ಲಕ್ಷ್ಮೀಟೆಕ್, ಬೆಳಗಾವಿ-590009.
7. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
8. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ/ವಿಕಾಸಸೌಧ/ಬಹುಮಹಡಿಗಳ ಕಟ್ಟಡ
9. ಸಂಬಂಧಿಸಿದ ಎಲ್ಲಾ ಇಲಾಖಾ ಮುಖ್ಯಸ್ಥರು
10. ಸಂಬಂಧಿಸಿದ ಎಲ್ಲಾ ಜಿಲ್ಲಾಧಿಕಾರಿಗಳು
11. ಸಂಬಂಧಿಸಿದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
12. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
13. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸುವರ್ಣಸೌಧ ಉಪವಿಭಾಗ,ಬೆಳಗಾವಿ-590020
14. ಮಾನ್ಯ ಜವಳಿ,ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
15. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
16. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
17. ಮಾನ್ಯ ಅಬಕಾರಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
18. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
19. ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
20. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು
21. ಸರ್ಕಾರದ ಕಾರ್ಯದರ್ಶಿ (ಎಂಎಸ್‌ಎಂಇ ಮತ್ತು ಗಣಿ)ಯವರ ಆಪ್ತ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
22. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ),ವಿಧಾನಸೌಧ, ಬೆಂಗಳೂರು.
23. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1 & ಬಂ.ಹೂ),ವಿಧಾನಸೌಧ, ಬೆಂಗಳೂರು.
24. ಸರ್ಕಾರದ ಅಧೀನ ಕಾರ್ಯದರ್ಶಿ ಆರ್ಥಿಕ ಇಲಾಖೆ (ವೆಚ್ಚ-2 & 10), ವಿಧಾನಸೌಧ, ಬೆಂಗಳೂರು.
25. ಸರ್ಕಾರದ ಉಪ ಕಾರ್ಯದರ್ಶಿ(ಸಕ್ಕರೆ)ಯವರ ಪತ್ರಾಂಕಿತ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
26. ಕಾರ್ಯದರ್ಶಿ, ದಿ ಸೌತ್ ಇಂಡಿಯನ್ ಶುಗರ್ ಮಿಲ್ಸ್ ಅಸೋಸಿಯೇಷನ್- ಕರ್ನಾಟಕ, ಫರ್ಹಾ ವಿನ್‌ಸ್ಪೋರ್ಡ್, 1ನೇ ಮಹಡಿ, 133/6, ಇನ್ಫೆಂಟ್ರಿ ರಸ್ತೆ, ಬೆಂಗಳೂರು-560001
27. ರಾಜ್ಯದ ಎಲ್ಲಾ ಸಾರ್ವಜನಿಕ/ಸಹಕಾರಿ/ಸಹಕಾರಿ ಗುತ್ತಿಗೆ/ಖಾಸಗಿ ಸಕ್ಕರೆ ಕಾರ್ಖಾನೆಗಳು
28. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

CS CamScanner